**<u>ದಿನಾಂಕಃ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ.ಎಬಿಕೆ. ವಕೀಲರಿಂದಃ</u>**

1) ದಾವಾ ಸ್ವತ್ತುಗಳು ನನ್ನ ತಂದೆ ವೆಂಕೋಬಾರಾವ್ ರವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮ್ಮ ಒಟ್ಟು ಕುಟುಂಬದಲ್ಲಿ ಯಾವುದೇ ಪಂಚಾಯತ್ ಪಾರಿಕತ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿ ಜೀವಿತ ಇದ್ದ ಕಾಲಕ್ಕೆ 1992 ರಲ್ಲಿ ಪಂಚಾಯತ್ ಪಾರಿಕತ್ ಆಗಿರುತ್ತದೆ. ಸದರಿ ಪಂಚಾಯತ್ ಪಾರಿಕತ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಾನು ಅಂತಹ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ತಾನು 2016 ರ ಪಾರಿಕತನ್ನು ಮಾತ್ರ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ. 1992 ರಲ್ಲಿ ಆದ ಪಂಚಾಯತ್ ಪಾರಿಕತ್ ಯಾರ ಬಳಿ ಇದೆ ಎಂದರೆ ಸಾಕ್ಷಿಯು ಆ ರೀತಿ 1992 ರಲ್ಲಿ ಪಾರಿಕತ್ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

2) 2016 ರಲ್ಲಿ ನಾನೇ ಸ್ವತಃ ಪಂಚಾಯತ್ ಪಾರಿಕತ್‌ನ್ನು ಬೆರಳಚ್ಚು ಮಾಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ದಾವಾ ಸ್ವತ್ತುಗಳ ಪೈಕಿ ಐಟಂ 1 ರಿಂದ 3 ರ ಸ್ವತ್ತುಗಳನ್ನು ಕೇರುಬಾಯಿ ರವರು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆಯು ಪೌತಿ ಆದ ನಂತರ ನನ್ನ ತಾಯಿ ಕೇರುಬಾಯಿ ರವರ ಹೆಸರಿಗೆ ಸದರಿ ಸ್ವತ್ತುಗಳ ಖಾತೆಯು ಪೌತಿ ಆಧಾರದ ಮೇಲೆ ಬದಲಾಗಿರುತ್ತದೆ. ದಾವಾ ಸ್ವತ್ತುಗಳ ಪೈಕಿ ಐಟಂ 1 ರಿಂದ 3 ರ ಸ್ವತ್ತುಗಳನ್ನು ನನ್ನ ತಂದೆ ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ 4 ರ ಸ್ವತ್ತನ್ನು ನನ್ನ ಸಹೋದರ ಖರೀದಿ ಮಾಡಿದ್ದರು. ನನ್ನ ಸಹೋದರ ಸದರಿ ಸ್ವತ್ತಿನಲ್ಲಿ ಪೂರ್ವ - ಪಶ್ಚಿಮ 45 ಅಡಿ, ಉತ್ತರ – ದಕ್ಷಿಣ 90 ಅಡಿಗಳಷ್ಟು ಖರೀದಿ ಮಾಡಿರುತ್ತಾರೆ. ನನ್ನ ಸಹೋದರ ಖರೀದಿ ಮಾಡಿದ ಸದರಿ ವಿಸ್ತೀರ್ಣದ ಸ್ವತ್ತಿನ ಪೂರ್ವಕ್ಕೆ ಕೇರುಬಾಯಿ ರವರ ಸ್ವತ್ತು ಇರುತ್ತದೆ. ನನ್ನ ತಾಯಿಯ ಹೆಸರು ಕೇರುಬಾಯಿ ಎಂದರೆ ಸರಿ.

3) ಎಸ್.ವೆಂಕಟರಾಮಯ್ಯ ರವರ ಮಗ ಶ್ರೀನಿವಾಸಮೂರ್ತಿ ರವರಿಂದ ನನ್ನ ಸಹೋದರ 45 X 90 ಅಡಿ ಅಳತೆಯ ಸ್ವತ್ತನ್ನು ಖರೀದಿ ಮಾಡಿದ್ದರು. ನನ್ನ ತಂದೆ ವೆಂಕೋಬಾರಾವ್. **ಸಾಕ್ಷಿಯು ಒಂದು ದಾಖಲೆಯನ್ನು ನೋಡಿ ಅದು ತನ್ನ ತಂದೆ ವೆಂಕೋಬಾರಾವ್ ರವರು ಎಲ್.ಎಸ್. ಹನುಮಂತರಾವ್ ರವರಿಂದ ಖರೀದಿ ಮಾಡಿದ ದೃಢೀಕೃತ ಕ್ರಯ ಪತ್ರ ಆಗಿರುವುದಾಗಿ ಗುರುತಿಸಿದ್ದು, ಸದರಿ ಪತ್ರವನ್ನು ನಿಪಿ.16 ಎಂದು ಗುರುತಿಸಲಾಗಿದೆ.** ನನ್ನ ತಂದೆ ಲಾಲಘಟ್ಟ ಗ್ರಾಮದ ಖಾನೇಷುಮಾರಿ ನಂ.62 ರಲ್ಲಿ ಸ್ವತ್ತನ್ನು ಖರೀದಿಸಿದ್ದರು. ಸದರಿ ಸ್ವತ್ತಿನ ಪಶ್ಚಿಮ ದಿಕ್ಕಿಗೆ ವೆಂಕಟರಾಮಯ್ಯ ರವರ ಸ್ವತ್ತು ಇರುತ್ತದೆ. ಸದರಿ ವೆಂಕಟರಾಮಯ್ಯ ರವರ ಮಗ ಶ್ರೀನಿವಾಸಮೂರ್ತಿ ರವರು ಆ ಸ್ವತ್ತನ್ನು ಲಕ್ಷ್ಮಮ್ಮ ರವರಿಗೆ ಮಾರಾಟ ಮಾಡಿದ್ದು, ಆಕೆ ಅದೇ ಸ್ವತ್ತನ್ನು ನನ್ನ ಸಹೋದರ ಬಿ.ಶ್ರೀನಿವಾಸ ರಾವ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

4) ದಿಃ26.05.1956 ರಲ್ಲಿ ನನ್ನ ತಂದೆ ನಿಪಿ.16 ರ ಖರೀದಿ ಪತ್ರದ ಮೇರೆಗೆ ಖರೀದಿಸಿದ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ನಿಡಿ.10 ರಿಂದ 16 ರಲ್ಲಿ ನನ್ನ ಸಹೋದರ ಗೋವಿಂದ ರಾವ್ ರವರ ಹೆಸರಿಗೆ ಖಾನೇಷುಮಾರಿ ಸಂ.32/27 ಎಂದು ನಮೂದಾಗಿದೆ ಎಂದರೆ ಸರಿ. ನಿಡಿ.15 ಮತ್ತು 16 ರಲ್ಲಿ ಸದರಿ ಖಾನೇಷುಮಾರಿ ಸಂ.32/27 ಕ್ಕೆ ಸಂಬಂಧಿಸಿದಂತೆ ಒಟ್ಟು 2 ಖಾತೆ ಆಗಿದ್ದು, ಅದೇ ಖಾನೇಷುಮಾರಿ ಸಂ.32/27 ಕ್ಕೆ 32/27ಎ ಎಂದು ಮತ್ತೊಂದು ಖಾತೆ ಆಗಿರುತ್ತದೆ ಎಂದರೆ ಸರಿ. ಖಾನೇಷುಮಾರಿ ಸಂ.32/27 ರ ಅಳತೆ 90 X 45 ಆಗಿರುತ್ತದೆ. ಸದರಿ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ನನಗೆ ಗೊತ್ತಿಲ್ಲ, ಪಶ್ಚಿಮಕ್ಕೆ ರಾಮಯ್ಯ ರವರ ಸ್ವತ್ತು ಇತ್ತು, ಉತ್ತರಕ್ಕೆ ಶಾನುಬೋಗರ ಉಳಿಕೆ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ಖಾನೇಷುಮಾರಿ ಸಂ.32/27ಎ ಸ್ವತ್ತಿನ ಅಳತೆ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ.

5) ನನ್ನ ಸಹೋದರ ಗೋವಿಂದ ರಾವ್ ರವರು ಶಾಲೆಯ ಮುಖ್ಯೋಪಧ್ಯಾಯರು ಎಂದರೆ ಸರಿ. ನನ್ನ ಸಹೋದರನ ಹೆಸರಿಗೆ ಖಾನೇಷುವಾರಿ ಸಂ.32/27ಎ ಸ್ವತ್ತಿನ ಖಾತೆಯು ಯಾವ ಆಧಾರದ ಮೇಲೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಚಾರದ ಕುರಿತು ನಾನು ನನ್ನ ಸಹೋದರನಿಂದ ಮಾಹಿತಿ ಪಡೆದಿಲ್ಲ. ನನ್ನ ಸಹೋದರ ಇ-ಖಾತಾ ದಾಖಲಿಸಲು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದರಾ ಎಂದು ನನಗೆ ಗೊತ್ತಿಲ್ಲ.

6) ನಿಡಿ.6 ರ ಕ್ರಯ ಪತ್ರದ ಮೇರೆಗೆ ಖರೀದಿ ಆಗಿದ್ದ ಸ್ವತ್ತಿನ ಖಾತೆಯು ನನ್ನ ಸಹೋದರ ಶ್ರೀನಿವಾಸ್ ರಾವ್ ರವರ ಹೆಸರಿಗೆ ಆಗಿರುವುದಿಲ್ಲ. ಸದರಿ ಸ್ವತ್ತಿನ ಖಾತೆಯು ಗೋವಿಂದರಾವ್ ರವರ ಹೆಸರಿಗೆ ಆಗಿದ್ದು, ಯಾವ ಆಧಾರದ ಮೇಲೆ ಆತನ ಹೆಸರಿಗೆ ಖಾತೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣ ದಾಖಲಾದ ನಂತರ ಸದರಿ ವಿಚಾರಗಳ ಕುರಿತು ನಾನು ಮಾಹಿತಿ ಪಡೆದಿಲ್ಲ, ಆದರೆ ಅವರವರ ನಡುವೆ ಹೊಂದಾಣಿಕೆ ಮಾಡಿಕೊಂಡು ಖಾತೆ ಮಾಡಿಸಿಕೊಂಡಿರುತ್ತಾರೆ. ಗೋವಿಂದ ರಾವ್ ರವರು ಸದರಿ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ದಾಖಲಿಸಿಕೊಳ್ಳುವ ಸಲುವಾಗಿ ಪಂಚಾಯಿತಿಗೆ ಕ್ರಯ ಪತ್ರ ಮತ್ತು ಇತರ ದಾಖಲೆಗಳನ್ನು ನೀಡಿರುತ್ತಾರೆ. ಸದರಿ ದಾಖಲೆಗಳ ಮೂಲ ಪ್ರತಿ ಮತ್ತು ನಕಲು ಪ್ರತಿಗಳು ಯಾರ ಬಳಿ ಇವೆ ಎಂದು ನನಗೆ ಗೊತ್ತಿಲ್ಲ.

7) ಸಾಕ್ಷಿ ದಿಃ25.06.1992 ರಂದು ಮಾಡಲಾದ ಒಪ್ಪಿಗೆ ಪತ್ರವನ್ನು ನೋಡಿ ಅದನ್ನು ತನ್ನ ತಾಯಿ ಕೇರುಬಾಯಿರವರು ತನ್ನ ಸಹೋದರ ಗೋವಿಂದರಾವ್ ರವರಿಗೆ ಬರೆದುಕೊಟ್ಟಿದ್ದಾಗಿ ಗುರುತಿಸಿದ ಕಾರಣ ಸದರಿ ದಾಖಲೆಯನ್ನು **ನಿಪಿ.17 ಎಂದು** ಗುರುತಿಸಲಾಯಿತು. ಖಾನೇಷುಮಾರಿ ನಂ.62 ರ ಖಾಲಿ ನಿವೇಶನ ಪೂರ್ವ - ಪಶ್ಚಿಮ 37 ಅಡಿಗಳು, ಉತ್ತರ - ದಕ್ಷಿಣ 120 ಅಡಿಗಳ ಸ್ವತ್ತಿಗೆ ನಿಪಿ.17 ರ ಒಪ್ಪಿಗೆ ಪತ್ರವನ್ನು ಮಾಡಲಾಗಿದೆ. ಸದರಿ ಸ್ವತ್ತಿನ ಪಶ್ಚಿಮಕ್ಕೆ ನನ್ನ ಸಹೋದರ ಶ್ರೀನಿವಾಸ್ ರವರಿಗೆ ಸೇರಿದ ಸ್ವತ್ತು ಇರುತ್ತದೆ. ಸದರಿ ನಿಪಿ.17 ರಲ್ಲಿ ತಿಳಿಸಿರುವ ಸ್ವತ್ತನ್ನು ನನ್ನ ತಂದೆ ದಿಃ26.05.1995 ರಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿ. ನಿಪಿ.17 ರ ಪತ್ರವನ್ನು ನಮ್ಮ ಗ್ರಾಮದ ಎಸ್.ರಾಮಸ್ವಾಮಿ ರವರು ತಯಾರಿಸಿರುತ್ತಾರೆ.

8) ನಿಪಿ.17 ರಲ್ಲಿ ಚನ್ನಪಟ್ಟಣ ತಾಲ್ಲೂಕಿನ ಪಿನ್ ಕೋಡ್ 562 160 ಎಂದು ನಮೂದಾಗಿರುತ್ತದೆ. 1992 ರಲ್ಲಿ ಚನ್ನಪಟ್ಟಣ ತಾಲ್ಲೂಕಿನ ಪಿನ್ ಕೋಡ್ 562 160 ಆಗಿರಲಿಲ್ಲ ಎಂದರೆ ಸರಿ. ಆ ಕಾಲಕ್ಕೆ ಚನ್ನಪಟ್ಟಣ ತಾಲ್ಲೂಕಿನ ಪಿನ್ ಕೋಡ್ 571 501 ಆಗಿತ್ತು ಎಂದರೆ ಸರಿ. ಸಾಕ್ಷಿಯು ಒಂದು ದಾಖಲೆಯನ್ನು ನೋಡಿ ಅದರ ಮೇರೆಗೆ ಚನ್ನಪಟ್ಟಣ ತಾಲ್ಲೂಕಿನ ಪಿನ್ ಕೋಡ್ ಈ ಹಿಂದೆ 571 501 ಎಂದು ಇರುವುದನ್ನು ದಿಃ25.11.2010 ರಂದು ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶದ ಮೇರೆಗೆ ದಿಃ25.11.2010 ರಂದು ಅನ್ವಯ ಆಗುವಂತೆ ಹೊಸ ಪಿನ್ ಕೋಡ್ 562 160 ಎಂದು ಚಾಲ್ತಿಗೆ ಬಂದಿರುವುದಾಗಿ ಗುರುತಿಸಿದ್ದು ಸದರಿ ದಾಖಲೆಯನ್ನು **ನಿಪಿ.18 ಎಂದು** ಗುರುತಿಸಲಾಯಿತು.

9) ಎಸ್. ರಾಮಸ್ವಾಮಿ ರವರಿಗೆ ಸೇರಿದಂತೆ ನಮ್ಮ ಗ್ರಾಮದಲ್ಲಿ ಸ್ವತ್ತುಗಳು ಇವೆ. ಸಾಕ್ಷಿಯು ದಿಃ06.06.2006 ರಂದು ಮಾಡಲಾದ ನೋಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ನೋಡಿ ಅದರಲ್ಲಿ ಎಸ್. ರಾಮಸ್ವಾಮಿ ರವರ ಭಾವಚಿತ್ರ ಮತ್ತು ಸಹಿ ಇರುವುದಾಗಿ ಗುರುತಿಸಿದ್ದು, ಸದರಿ ಭಾವಚಿತ್ರ ಮತ್ತು ಸಹಿಗಳ ಗುರುತಿಸುವಿಕೆಗಾಗಿ ಆ ದಾಖಲೆಯನ್ನು **ನಿಪಿ.19 ಎಂದು** ಗುರುತಿಸಿದ್ದು, ರಾಮಸ್ವಾಮಿ ರವರ ಭಾವಚಿತ್ರವನ್ನು **ನಿಪಿ.19(ಎ) ಎಂದು** ಮತ್ತು ಅವರ ಸಹಿಯನ್ನು **ನಿಪಿ.19(ಬಿ) ಎಂದು** ಗುರುತಿಸಲಾಯಿತು. ಸಾಕ್ಷಿಯು ಸದರಿ ಪತ್ರದಲ್ಲಿ ಇರುವ ರಾಮಸ್ವಾಮಿ ರವರ ಹೆಂಡತಿ ಪದ್ಮಾವತಿ ರವರ ಭಾವಚಿತ್ರವನ್ನು ಹಾಗೂ ಅವರ ಮಗ ಎಲ್.ಆರ್. ನಾರಾಯಣಸ್ವಾಮಿ ರವರ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

10) ನಿಪಿ.17 ರಲ್ಲಿ ನಮೂದಿಸಿರುವ ದಿಃ20.05.1959 ರ ಖರೀದಿ ಪತ್ರ ಯಾರ ಬಳಿ ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.17 ಮತ್ತು ನಿಪಿ.19 ರಲ್ಲಿ ಇರುವ ರಾಮಸ್ವಾಮಿ ರವರ ಸಹಿಗಳು ಬೇರೆ ಬೇರೆ ರೀತಿಯಲ್ಲಿ ಇವೆ ಎಂದರೆ ಸಾಕ್ಷಿಯು ಬದಲಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಗಳಿಗೆ ಪಿತಾರ್ಜಿತ ಸ್ವತ್ತಿನಲ್ಲಿ ಇರುವ ಭಾಗಶಃವನ್ನು ಹೊಡೆದುಕೊಳ್ಳುವ ಸಲುವಾಗಿ ನನ್ನ ಸಹೋದರರು ನಿಪಿ.17 ರ ದಾಖಲೆಯನ್ನು ಸುಳ್ಳು ಸೃಷ್ಟನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಹೇಳಿದಂತೆ ಒಂದು ವೇಳೆ ನಿಪಿ.17 ರ ದಾಖಲೆಯನ್ನು ನನ್ನ ತಾಯಿಯೇ ಮಾಡಿಸಿದ್ದಲ್ಲಿ ಅದನ್ನು ನಾವೇ ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆವು, ಆದರೆ ಅದನ್ನು ನಾವು ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸೃಷ್ಟಿ ಮಾಡಿರುವ ಕಾರಣದಿಂದಾಗಿ ಆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

11) ಸಾಕ್ಷಿಯು ಒಂದು ದಾಖಲೆಯನ್ನು ನೋಡಿ ಅದನ್ನು ತನ್ನ ಸಹೋದರ ಶ್ರೀನಿವಾಸ್ ರವರು ಗೋವಿಂದರಾಜ್ ರವರಿಗೆ ಬರೆದುಕೊಟ್ಟ ಒಪ್ಪಿಗೆ ಪತ್ರ ಎಂದು ಗುರುತಿಸಿದ ಕಾರಣ ಅದನ್ನು **ನಿಪಿ.20 ಎಂದು** ಗುರುತಿಸಲಾಗಿದೆ. ನಿಪಿ.20 ರ ದಾಖಲೆಯ ದಿಃ17.09.1998 ರಂದು ಮಾಡಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ದಾವಾ 4ನೇ ಐಟಂ ಸ್ವತ್ತಿಗೆ ಮಾಡಲಾಗಿದ್ದು ಸದರಿ ಸ್ವತ್ತಿನ ಪೂರ್ವಕ್ಕೆ ಕೇರುಬಾಯಿ ರವರ ನಿವೇಶನ ಇರುತ್ತದೆ ಎಂದರೆ ಸರಿ. ನನ್ನ ಸಹೋದರ ಶ್ರೀನಿವಾಸ್ ರಾವ್ ರವರು ದಾವಾ 4ನೇ ಐಟಂ ಸ್ವತ್ತಿನಲ್ಲಿ 45 X 90 ಅಡಿಗಳ ಸ್ವತ್ತನ್ನು ಖರೀದಿ ಮಾಡಿದ್ದರು. ನಿಪಿ.20 ರ ಪತ್ರದ ಮೇರೆಗೆ ಶ್ರೀನಿವಾಸ್ ರಾವ್

ರವರು ಗೋವಿಂದರಾವ್ ರವರಿಗೆ 46 X 120 ಅಡಿಗಳಷ್ಟು ಸ್ವತ್ತನ್ನು ಬರೆದುಕೊಟ್ಟಿರುತ್ತಾರೆ. ದಾವಾ 4ನೇ ಐಟಂ ಸ್ವತ್ತಿನಲ್ಲಿ ನಮ್ಮ ಕುಟುಂಬಕ್ಕೆ ಪಿತಾರ್ಜಿತವಾಗಿ ಒಟ್ಟು ಪೂರ್ವ – ಪಶ್ಚಿಮ 37 ಅಡಿ ಹಾಗೂ ಉತ್ತರ - ದಕ್ಷಿಣ 120 ಅಡಿಗಳಷ್ಟು ಸ್ವತ್ತು ಇತ್ತು. ಸದರಿ ಸ್ವತ್ತನ್ನು ನನ್ನ ತಂದೆ ನಿಪಿ.16 ರ ಕ್ರಯ ಪತ್ರದ ಮೇರೆಗೆ ಖರೀದಿ ಮಾಡಿದ್ದರು.

12) ಖಾನೇಷುಮಾರಿ ನಂ.32/27ಎ ನಲ್ಲಿ ಇರುವ 110 X 105 ಸ್ವತ್ತು ನಮ್ಮ ಕುಟುಂಬದ ಪಿತಾರ್ಜಿತ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.17 ರಲ್ಲಿ ಇರುವ ಸಾಕ್ಷಿದಾರರ ತಂದೆಯ ಹೆಸರು, ಅವರ ವಿಳಾಸಗಳ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ.20 ರ ಪತ್ರವನ್ನು ತಯಾರಿಸಿದ ಪತ್ರಬರಹಗಾರರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.20 ರಲ್ಲಿ ಇರುವ ಸಾಕ್ಷಿದಾರರ ತಂದೆಯ ಹೆಸರು, ಅವರ ವಿಳಾಸಗಳ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.

13) ನನ್ನ ತಂದೆ ಮೃತ ಪಟ್ಟ ನಂತರ ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಸ್ವಾಭಾವಿಕವಾಗಿ ಮರಣ ಹೊಂದಿಲ್ಲ ಎಂದರೆ ಸರಿ. ಆ ಸಂಬಂಧ ಪೊಲೀಸ್ ಠಾಣೆಗೆ ದೂರು ದಾಖಲಿಸಿರುತ್ತೇವೆ. ಆ ಬಗ್ಗೆ ನನ್ನ ಸಹೋದರ ಗೋವಿಂದ ರಾವ್ ರವರು ದೂರನ್ನು ಪೊಲೀಸ್ ಠಾಣೆಗೆ ನೀಡಿದ್ದರು. ಆತನನ್ನು ಹೊರತು ಪಡಿಸಿ ನಮ್ಮ ಕುಟುಂಬದ ಇತರೆ ಸದಸ್ಯರು ಸದರಿ ದೂರಿಗೆ ಸಹಿ ಮಾಡಿರುವುದಿಲ್ಲ. ಆ ರೀತಿ ದಾಖಲಿಸಿದ ದೂರಿನ ಪ್ರತಿಗಳು ನಮ್ಮ ಬಳಿ ಇರುವುದಿಲ್ಲ.

<u>ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**